# ಗಾಯಗೊಂಡ ಮಳೆ

ಖಾಲಿ ಕಾಗದದ ಮೇಲೆ
ಏನನ್ನಾದರೂ
ಬರೆದುಕೊಡು ಇಲ್ಲವೆ ಮಳೆಯನ್ನಾದರೂ
ಚಿತ್ರಿಸು, ಎಂದಳು.

ಖಾಲಿ ಕಾಗದದ ಮೇಲೆ
ಅಕ್ಷರಗಳನ್ನು
ಮೂಡಿಸುತ್ತ ಹೋದೆ; ಅಕ್ಷರಗಳು ಬೆಳೆದು
ಕಪ್ಪು ಚುಕ್ಕಿಗಳಾದವು
ಪದಗಳು ಅರ್ಥ ಕಳೆದುಕೊಂಡವು.



ಅವಳು ಒಂದೊಂದು
ವಾಕ್ಯವನ್ನು,
ಪದ ಪುಂಜವವನ್ನು, ಪದಗಳ ನಡುವಿನ
ನಿಶ್ಯಬ್ದವನ್ನು ಆಲಿಸಿದಳು.
ಪದಗಳು ಸೇತುವೆಯಾಗಿ
ಅರ್ಥಕಟ್ಟಿಕೊಡಲಿಲ್ಲ.
ನೋಡಿದವರು ಯಾರೇ ಇರಲಿ; ಶಪಿಸದೆ
ಸುಮ್ಮನೆ ಇರಲಾರರು.

ಹಾಳೆಯನ್ನು ಮಳೆಯಲ್ಲಿ ತೊಳೆದು
ಮಳೆಯನ್ನು
ಚಿತ್ರಿಸುವ ಆಸೆ ಹುಟ್ಟಿತು.

ಬಾಗಿಲು ತೆರೆದೆ
ಮನೆಬಾಗಿಲಲ್ಲಿ ಮಳೆ ನೆಲಮುಗಿಲಿಗೆ ಒಂದಾಗಿ
ನಿಂತಿತ್ತು, ಅದಕ್ಕೆ ತೂಫಾನ್
ಸಾಥ್ ನೀಡುತ್ತಿತ್ತು.
ಚಿತ್ರಿಸುವುದು ಹೇಗೆ
ಒದ್ದೆ ಕಾಗದದ ಮೇಲೆ ಗಾಯಗೊಂಡ ಮಳೆಯ
ಅಹಂ ಅನ್ನು?

● **ಎಂ.ಎಸ್. ರುದ್ರೇಶ್ವರಸ್ವಾಮಿ**